**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಅಫಜಲಪೂರ.**

**ಸಿಸಿ ನಂ.498/2023**

**ಫಿರ್ಯಾದಿಃ** ಸರಕಾರದ ಪರವಾಗಿಃ ದೇವಲಗಾಣಗಾಪೂರ ಪೊಲೀಸ ಠಾಣೆ.

**-ಃ ವಿರುದ್ದ ಃ-**

**ಆರೋಪಿ/ತರುಃ** ರಾಮು ತಂದೆ ಚಂದಪ್ಪ ಹೇರೂರ,
48 ವರ್ಷ, ಉಃ ಟ್ರಾಕ್ಟರ ಚಾಲಕ ಮತ್ತು ಮಾಲೀಕ
ವಾಸಃ ದೇವಲಗಾಣಗಾಪೂರ, ತಾಃ ಅಫಜಲಪೂರ,
ಜಿಃ ಕಲಬುರಗಿ.

**ದೋಷಾರೋಪಣೆ**

ನಾನು ಶ್ರೀ ಅನಿಲ ಅಮಾತೆ., ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಅಫಜಲಪೂರ, ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಆರೋಪಕ್ಕೆ ಗುರಿಪಡಿಸುತ್ತೇನೆ.

1. ದಿನಾಂಕ 23.03.2023 ರಂದು ಬೆಳಗಿನ ಜಾವ 06-30 ಗಂಟೆ ಸುಮಾರಿಗೆ ದೇವಲಗಾಣಗಾಪೂರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ದೇವಲಗಾಣಗಾಪೂರ ಗ್ರಾಮದ ಭೀಮಾ ಬ್ರಿಜ್ ಹತ್ತಿರ ಆರೋಪಿತನಾದ ನೀವು ನಿನ್ನ ಬಾಬ್ತು ಟ್ರ್ಯಾಕ್ಟರ ಚೆಸ್ಸಿ ನಂ. MEA4ACBFAK1219979 ಮತ್ತು ಇಂಜಿನ ನಂ.SJ37A49007 ಮತ್ತು ನಂಬರ ಇರದ ಟ್ರಾಲಿ ಟ್ರ್ಯಾಕ್ಟರ ನಂ.ಕೆಎ-32/ಟಿಬಿ-6994 ಅದಕ್ಕೆ ನಂಬರ ಇರದ ಕೆಂಪು ಬಣ್ಣದ ಟ್ರೈಲಿ ನೇದ್ದರಲ್ಲಿ ಭೀಮಾ ನದಿಯಿಂದ ಸರಕಾರದಿಂದ ಅಧಿಕೃತವಾಗಿ ಯಾವುದೇ ಪರವಾನಿಗೆ ಇಲ್ಲದೆ ಹಾಗೂ ರಾಜ್ಯ ಸರಕಾರಕ್ಕೆ ರಾಜ್ಯ ಧನ ಕಟ್ಟದೆ ಅಕ್ರಮವಾಗಿ ಕಳ್ಳತನದಿಂದ ಮರಳು ಸಾಗಾಣಿಕೆ ಮಾಡುತ್ತಿದ್ದ ಕಾರಣ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.379 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಪ್ರಃ-1) ಮೇಲ್ಕಾಣಿಸಿದ ದೋಷಾರೋಪಣೆಯನ್ನು ಓದಿ ಹೇಳಿ ತಿಳಿಸಿದ್ದನ್ನು ಅರ್ಥಮಾಡಿಕೊಂಡಿದ್ದೀರಾ?

ಉಃ

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತೀಯೋ ಅಥವಾ ವಿಚಾರಣೆ ನಡೆಯಬೇಕಾ?

ಉಃ

(ದೋಷಾರೋಪಣೆಯನ್ನು ಆರೋಪಿತನಿಗೆ ಓದಿ ಹೇಳಿದ್ದು, ಆತನು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ದಿನಾಂಕಃ21.04.2025 ಪ್ರ.ದ.ನ್ಯಾ.ದಂ. ಅಫಜಲಪೂರ